**ತಂತ್ರಗಾರ ಹಾರ್ದಿಕ್, ಪ್ರಯೋಗಶೀಲ ರಾಹುಲ್, ಆಕ್ರಮಣಕಾರಿ ಪಂತ್**

# ಯಾರು ಹಿತವರು ಈ ಮೂವರೊಳಗೆ...

**ಭಾರತೀಯ ಕ್ರಿಕೆಟ್ ತಂಡದ ಭವಿಷ್ಯದ ನಾಯಕನ ಸ್ಥಾನಕ್ಕೆ ಮೂವರು ಹುರಿಯಾಳುಗಳನ್ನು ಕಾಣಿಸಿರುವುದು 2022ರ 'ಐಪಿಎಲ್ ಟೂರ್ನಿ'ಯ ಬಹು ಮುಖ್ಯ ಸಾಧನೆ. ಹಾರ್ದಿಕ್ ಪಾಂಡ್ಯ, ಕೆ.ಎಲ್. ರಾಹುಲ್ ಹಾಗೂ ರಿಷಭ್ ಪಂತ್ ವೈಯಕ್ತಿಕ ಪ್ರದರ್ಶನದ ಜೊತೆಗೆ ತಂಡವನ್ನು ಮುನ್ನಡೆಸುವ ನಿಟ್ಟಿನಲ್ಲೂ ಗಮನಸೆಳೆದಿದ್ದಾರೆ.**

■ **ವಿಶಾಖ ಎನ್.**

ನಿಕೋಲಸ್ ಪೂರನ್ ಅವರದ್ದೊಂದು ಸ್ಫೂರ್ತಿ ಕಥೆ ಇದೆ. ರಸ್ತೆ ಅಪಘಾತದಲ್ಲಿ ಬೆನ್ನುಮೂಳೆಗಳಿಗೆ ಪೆಟ್ಟುತಿಂದು, ಆಸ್ಪತ್ರೆ ಹಾಸಿಗೆ ಮೇಲೆ ಅವರು ಮಲಗಿದ್ದಾಗ, ಕ್ರಿಕೆಟ್ ಆಡುವುದನ್ನು ಮರೆತುಬಿಡು ಎಂದಿದ್ದರು ವೈದ್ಯರು. ಅವರು ಅದನ್ನೇನಾದರೂ ತಲೆಯೊಳಗೆ ಹುಳದಂತೆ ಬಿಟ್ಟುಕೊಂಡಿದ್ದಿದ್ದರೆ, ಈಗ ಲೀಲಾಜಾಲವಾಗಿ ಸಿಕ್ಸರ್ ಹೊಡೆಯುವುದನ್ನು ನೋಡಲು ಸಾಧ್ಯವಿರುತ್ತಿರಲಿಲ್ಲ. ಹಾರ್ದಿಕ್ ಪಾಂಡ್ಯ ಕೂಡ ನೋವಿನಿಂದ ನರಳಿದ್ದರು. ಫಾರ್ಮ್ ಕಳೆದುಕೊಂಡಿದ್ದರು. ಅವರೂ ಹಾಸಿಗೆ ಮೇಲೆಯೇ ವಿರಮಿಸಿದ್ದು. ಕ್ರೀಡಾಂಗಣಕ್ಕೆ ಅವರ ಮರುಪ್ರವೇಶ ಮಾತ್ರ ಆಸಕ್ತಿದಾಯಕವಾಗಿತ್ತು. 'ಗುಜರಾತ್ ಟೈಟನ್ಸ್' ತಂಡದ ನಾಯಕರಾಗಿ ಅವರು ನೊಗ ಹೊತ್ತು ನಿಭಾಯಿಸಿದ ರೀತಿಗೆ ಘಟಾನುಘಟಿಗಳೂ ಶಹಬ್ಬಾಸ್ ಹೇಳಿದರು.

ಹಾರ್ದಿಕ್ ಮೂಲತಃ ದಾಳಿಕೋರ ಸ್ವಭಾವದ ಬ್ಯಾಟ್ಸ್‌ಮನ್ ಆಗಿದ್ದವರು. ಆದರೆ ಈ ಸಲದ 'ಇಂಡಿಯನ್ ಪ್ರೀಮಿಯರ್ ಲೀಗ್' (ಐಪಿಎಲ್)ನಲ್ಲಿ ಅವರ ಸ್ಟ್ರೈಕ್‌ರೇಟ್ 131.26. ಸಹಜ ಸ್ವಭಾವವನ್ನು ಹತ್ತಿಕ್ಕಿಕೊಂಡು ಆಡುವ ಮನೋಭೂಮಿಕೆಯನ್ನು ಅವರು ಸೃಷ್ಟಿಸಿಕೊಂಡಿದ್ದರೆನ್ನುವುದಕ್ಕೆ ಇದೇ ಸಾಕ್ಷಿ. 'ಗುಜರಾತ್ ಟೈಟನ್ಸ್' ತಂಡ ಈ ಬಾರಿ ಚಾಂಪಿಯನ್ ಆದ ಸಂದರ್ಭದ ಭೂಮಿಕೆ ಹಾಗೂ ಫೈನಲ್ಸ್ ತವರು ನೆಲದಲ್ಲೇ ಆಯೋಜಿತವಾದದ್ದು ಎಲ್ಲದರ ಹಿಂದೆ ಯಾವುದೋ ಕಾಣದ ಕೈಗಳು ಕೆಲಸ ಮಾಡಿರಬಹುದೇನೊ ಎಂಬ ಶಂಕೆಯನ್ನೂ ಕ್ರಿಕೆಟ್ ಸೂಕ್ಷ್ಮ ವಿಶ್ಲೇಷಿಸುತ್ತಿರುವವರು ವ್ಯಕ್ತಪಡಿಸಿದ್ದಾರೆ. ಅದರ ಹೊರತಾಗಿಯೂ ಹಾರ್ದಿಕ್ ನಾಯಕತ್ವವನ್ನು ನಿಭಾಯಿಸಿದ ರೀತಿ ಗಮನಾರ್ಹ. ಅವರು ಮುಂಚೂಣಿಯಲ್ಲಿ ನಿಂತು ಉದಾಹರಣೆಯೆಂಬಂತೆ ಆಡಿದರು. ಆ ತಂಡದ ಪರವಾಗಿ ಅತಿ ಹೆಚ್ಚು ರನ್ ಗಳಿಸಿದವರು ಖುದ್ದು ಹಾರ್ದಿಕ್. ಒಟ್ಟಾರೆ ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿ ಅವರಿದ್ದಾರೆ. 44.27ರ ಸರಾಸರಿಯಲ್ಲಿ 487 ರನ್‌ಗಳನ್ನು ಅವರು ಕಲೆಹಾಕಿದರು. ಔಟಾಗದೆ 87 ರನ್ ದಾಖಲಿಸಿದ್ದು ಅತಿ ಹೆಚ್ಚು ವೈಯಕ್ತಿಕ ಮೊತ್ತ.

ಹಾಗೆ ನೋಡಿದರೆ 'ಗುಜರಾತ್ ಟೈಟನ್ಸ್'ನ ಯಾವ ಬೌಲರ್ ಕೂಡ ಚಾಂಪಿಯನ್ ಎಂದೆನಿಸಿಕೊಳ್ಳುವಷ್ಟು ವಿಕೆಟ್‌ಗಳನ್ನು ಪಡೆಯಲಿಲ್ಲ. ಅತಿ ಹೆಚ್ಚು ವಿಕೆಟ್ ಪಡೆದವರ ಪಟ್ಟಿಯಲ್ಲಿ 7ನೇ ಸ್ಥಾನದಲ್ಲಿರುವ ಮೊಹಮ್ಮದ್ ಶಮಿ ಅನುಭವವನ್ನು ಹಾರ್ದಿಕ್ ನೆಚ್ಚಿಕೊಂಡರು. ಶಮಿ ಪಡೆದ 20 ವಿಕೆಟ್‌ಗಳು ಮುಖ್ಯವಾದವು. ಪ್ರತಿ ಓವರ್‌ಗೆ 8 ರನ್ ನೀಡಿದ ಎಕಾನಮಿ ರೇಟ್ ಅವರದ್ದು. 'ರಾಜಸ್ಥಾನ ರಾಯಲ್ಸ್' ತಂಡದ ಯಜುವೇಂದ್ರ ಚಾಹಲ್ (27 ವಿಕೆಟ್), 'ರಾಯಲ್ ಚಾಲೆಂಜರ್ಸ್ ಬೆಂಗಳೂರು'



ಹಾರ್ದಿಕ್ ಪಾಂಡ್ಯ